OS 129/2017
PW-1

ದಿನಾಂಕಃ 16-12-2023 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ವೈ ಡಿ ಎಸ್ ವಕೀಲರಿಂದಃ**

ದಾವಾಸ್ತಿಗಳು ಮೂಲತಃ ದರ್ಖಾಸಿನ ಮೂಲ ಮಂಜೂರಾದ ಜಮೀನುಗಳು ಎಂದರೆ ಸರಿ. ಸದರಿ ಮಂಜೂರುದಾರರ ಕಡೆಯಿಂದ ನಾನು ದಾವಾಸ್ತಿಯನ್ನು ಖರೀದಿಸಿರುತ್ತೇನೆ ಎಂದರೆ ಸರಿ. ನಂತರ ನಾನು ನನ್ನ ಹೆಂಡತಿ ಹೆಸರಿಗೆ ದಾನಪತ್ರವನ್ನು ಬರೆದಿರುತ್ತೇನೆ ಎಂದರೆ ಸರಿ. ಈ ದಾವೆ ಹೂಡಿದ ನಂತರ ನಾನು ತಿದ್ದುಪಡಿ ಪತ್ರವನ್ನು ದಿಃ 21-11-2017 ರಂದು ಮಾಡಿರುತ್ತೇನೆ ಎಂದರೆ ಸರಿ. ದಾವಾಸ್ತಿ ಜಮೀನು ಎಲ್ಲಿ ಬರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಆಕಾರ್ ಬಂದ್ ಸರ್ವೆ ಸ್ಕೇಚ್ ನ್ನು ಹಾಜರುಪಡಿಸಿರುತ್ತೇನೆ.

ನಿಪಿ-6 ರಲ್ಲಿ ತೋರಿಸಿರುವ ಲಕ್ಷ್ಮಿಸಾಗರ ಗ್ರಾಮದ ಸರ್ವೆ ನಂ 103 ಮತ್ತು 104 ರ ಜಮೀನುಗಳು ಪ್ರತಿವಾದಿಗೆ ಸೇರಿದ ಜಮೀನು ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯನ್ನು ಸರ್ವೆ ನಂ 97 ರ ಕುರಿತು ದಾಖಲಿಸಿದ್ದೆನೆ. ನಿಪಿ-6 ರಲ್ಲಿ ಸರ್ವೆ ನಂ 94 ರಿಂದ 102 ರವರೆಗಿನ ಜಮೀನುಗಳು ಸಾಗುವಳಿಗೆ ಯೋಗ್ಯವಲ್ಲದ ಜಮೀನು ಎಂದು ಉಲ್ಲೇಖಸಿರುತ್ತಾರೆ ಎಂದರೆ ಸಾಕ್ಷಿ ಸದರಿ ಜಮೀನುಗಳು ಸರ್ಕಾರ ಕೊಟ್ಟಿರುವುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-6 ನ್ನು ನಾನು ತುಂಬಾ ವರ್ಷಗಳ ಹಿಂದೆ ಸದರಿ ಆಸ್ತಿ ಶಿವಮೊಗ್ಗ ವ್ಯಾಪ್ತಿಗೆ ಒಳಪಟ್ಟಿರುವಾಗ ತೆಗೆದುಕೊಂಡಿರುತ್ತೇನೆ. ನಿಪಿ-6 ನ್ನು ದಿಃ06-06-1994 ರಂದು ಪಡೆದಿರುತ್ತೇನೆ ಎಂದರೆ ಸರಿ. ಸದರಿ ನಿಪಿ-6 ನ್ನು ನಮ್ಮ ಪಕ್ಕದ ಜಮೀನಿನವರಾದ ಲಲಿತಮ್ಮ ಎನ್ನುವರು ಪಡೆದಿದ್ದು ನಾನು ಅವರಿಂದ ಪಡೆದುಕೊಂಡಿರುತ್ತೇನೆ. ಲಲಿತಮ್ಮನವರಿಂದ ನಿಪಿ-6 ನ್ನು ಅವರು ಪಡೆದಾಗಲೇ ಪಡೆದುಕೊಂಡಿರುತ್ತೇನೆ.

ಸರ್ವೆ ನಂ 103 ರಿಂದ 110 ರವರೆಗಿನ ಜಮೀನುಗಳು ಸರ್ವೆ ನಂ 95 ರಿಂದ 100 ರವರೆಗಿನ ಉತ್ತರ ದಿಕ್ಕಿಗೆ ಬರುತ್ತದೆ ಎಂದರೆ ಸರಿ.

(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.